

ಎಂದು ಗತ್ತಿನ ಭಾಷೆಯಲ್ಲಿ ವಿಚಾರಿಸಿದ ಪೊಲೀಸ್. ನಾನು ವಿನಯವಾಗಿ ನನ್ನ ಹರಕುಮುರುಕು ತಮಿಳು ಬಳಸಿ 'ಎಂದ ಮಾದರಿ ಎಂಟ್ರಿ ಪಾಸ್? ಎನಕ್ಕು ತೆರಿಯಾದು' ಎಂದೆ. 'ನೀವೆಲ್ಲಿಂದ ಬರುತ್ತಿದ್ದೀರಿ?' ಎಂದ. 'ನಮ್ಮ ಗೆಳೆಯನ ಮನೆಗೆ ವಾಲ್ಪರೈ ಹೋಗಿದ್ವಿ' ಎಂದಾಗ, 'ಎಷ್ಟು ದಿನದ ಹಿಂದೆ?' ಎಂದ. 'ಮೂರು ದಿನವಾಯಿತು' ಎಂದೆ. 'ಅರಣ್ಯ ಇಲಾಖೆಯ ಪಾಸ್ ಪಡೆಯದೆ ನೀವು ಅನಧಿಕೃತವಾಗಿ ಹೋಗಿದ್ದೀರಿ. ನಮ್ಮ ಸಾಹೇಬರು ಬರುವ ತನಕ ನಿಂತಿರಿ' ಎಂದ.

ಅಷ್ಟರಲ್ಲಿ ಲೋಕೇಶ್ ಮೊಸಳೆ ಇಳಿದು ಬಂದು, ಅವರಿಗೆ ತಮಿಳು ಬಾರದು. ತಡಬಡಾಯಿಸುವ ಇಂಗ್ಲೀಷಿನಲ್ಲಿ ಏನೋ ಸಮಜಾಯಿಷಿ ಹೇಳಲು ಹೋದರು. ಅದವನಿಗೆ ಅರ್ಥವಾಗಲಿಲ್ಲ. ಯಾವ ಕೆಲಸದ ಮೇಲೆ ಹೋಗಿದ್ದಿರಿ ಎಂದು ಕೇಳಿದ. ನಾನು ವೈಲ್ಡ್ ಲೈಫ್ ಫೋಟೋಗ್ರಫಿ ಎಂದೆ. ಅದಕ್ಕವನು ಹೌಹಾರಿ ಓಹೋ ಫೋಟೊ ಹಿಡಿಯೋರಾ? ಇರಿ ಎಂದವನೆ ಅವನ ಸಾಹೇಬನಿಗೆ ತುರ್ತು ಫೋನು ಹಚ್ಚಿದ. ಅಪರಾಧಿಗಳ ಹಿಡಿದಿರುವ ರೀತಿ ಆವೇಶದಲ್ಲಿ ಹೇಳುತ್ತಿದ್ದ. ನಾನು ಮಾತಾಡಲು ಹೋದರೆ ಸಿಟ್ಟು ಮಾಡತೊಡಗಿದ. ತೆಪ್ಪಗೆ ನಿಲ್ಲು ಎಂದು ಅರ್ಭಟಿಸಿದ.

ಅಷ್ಟರಲ್ಲಿ ತಮಿಳು ಚೆನ್ನಾಗಿ ಮಾತಾಡುವ ಪುಷ್ಪರಾಜನ ಕರೆದೆ. ಇವನಿಗೆ ಅದೇನು ಬೇಕೋ ತಿಳಿಸಿ ಹೇಳಪ್ಪ ಎಂದೆ. ಮೊದಮೊದಲು ಸಮಾಧಾನದಿಂದ ಹೇಳುತ್ತಿದ್ದ ಪುಷ್ಪ ನಂತರ ಅವನ ಜೊತೆ ಜಗಳಕ್ಕೆ ಬಿದ್ದ. ಆ ಫಾರೆಸ್ಟ್ ಗಾರ್ಡ್ ಕೊಂಚ ಅಸಹನೆಯ ಮನುಷ್ಯನಾಗಿ ಕಾಣುತ್ತಿದ್ದ. ಪುಷ್ಪರಾಜನ ಬಿಪಿಯ ಮಟ್ಟ ಹೆಚ್ಚಿದ ಕೂಡಲೇ ಅವನು ಫಾರೆಸ್ಟ್ ಸ್ಕ್ವಾಡ್ ಅವರಿಗೆ ಸಂಪರ್ಕಿಸಿ ಇಲ್ಲಿ ದೊಡ್ಡ ಅನಾಹುತವೇ ಜರುಗಲಿದೆ. ನನ್ನ ಮೇಲೆ ಮೂವರು ಅಟ್ಯಾಕ್ ಮಾಡಿ, ಫೋನು ಕಿತ್ತುಕೊಳ್ಳುತ್ತಿದ್ದಾರೆ. ಬೇಗ ಬನ್ನಿ ಎಂದು ವೈರ್‌ಲೆಸ್ ಹಿಡಿದು ಅರಚಾಡಿದ.

ಕಾರಿನೊಳಗೆ ಏನೇನಿದೆ ಚೆಕ್ ಮಾಡುತ್ತೇನೆ ಎಂದು ಹತ್ತಿರ ಹೋದ. ಹಿಂದಿನ ಸೀಟಿನಲ್ಲಿ ಭಾರಿ ಮೂರು ಕ್ಯಾಮೆರಾಗಳನ್ನು ಉದ್ದಕ್ಕೆ ವೆಪೆನ್ ಥರ ಮಲಗಿಸಿದ್ದೆವು.